# ಗಣತಿ ಆಧಾರಿತ ರಾಜ್ಯ ಸಾಧನಾ ಸಮೀಕ್ಷೆ-2017
## ಪೂರ್ವ ಸಿದ್ಧತಾ ಪರೀಕ್ಷೆ ಪ್ರಶ್ನೆಪತ್ರಿಕೆ

**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ________________________________________**

**ಅಂಕಗಳು: 30**

**ತರಗತಿ: 7** **ಕನ್ನಡ** **ಸಮಯ: 45 ನಿಮಿಷಗಳು**

**ಸೂಚನೆಗಳು**

- **ಸರಿಯಾದ ಉತ್ತರಕ್ಕೆ ನಿಮಗೆ ನೀಡುವ OMR ಹಾಳೆಯಲ್ಲಿ ಪ್ರತಿ ಪ್ರಶ್ನೆಗೆ ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಆಯ್ಕೆಗೆ ನೀಲಿ ಅಥವಾ ಕಪ್ಪು ಬಾಲ್ ಪೆನ್ ನಿಂದ ಶೇಡ್ ಮಾಡಿ**
- **ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರಗಳಿಗೆ ಶೇಡ್ ಮಾಡಬಾರದು**

=============================================

1. ಪುಟ್ಟಜ್ಜಿಯ ಬಳಿ ಹುಡುಗ ಯಾವ ಕತೆ ಹೇಳಬೇಕೆಂದು ಕೇಳಿದ? 18x1=18

   a. ಸಣ್ಣ ಕತೆ b. ಹಾಡ್ಗತೆ c. ತಮಾಷೆ ಕತೆ d. ದೊಡ್ಡ ಕತೆ

2. ‘ಇದು ನಾವು ಸಾಕಿಕೊಂಡ ಜಿಂಕೆ’ – ಈ ಮಾತನ್ನು ಯಾರು ಹೇಳಿದರು?

   a. ಯುವತಿ b. ಯುವಕ c. ಪುಟ್ಟಜ್ಜಿ d. ಹುಡುಗ

3. ಸರ್ವನಾಮಕ್ಕೆ ಒಂದು ಉದಾಹರಣೆ

   a. ಭೀಮ b. ಹುಲಿ c. ನಾವು d. ಕುಂಟ

4. ರೂಢನಾಮಕ್ಕೆ ಒಂದು ಉದಾಹರಣೆ

   a. ನದಿ b. ಸುಮಿತ್ರ c. ನಾನು d. ಅವರು

5. ಸೀನಸೆಟ್ಟರು ತಮ್ಮ ಜಮೀನಿನಲ್ಲಿ ಏನನ್ನು ಬೆಳೆಯುತ್ತಿದ್ದರು?

   a. ಭತ್ತ b. ಜೋಳ c. ರಾಗಿ d. ಸಾಸಿವೆ

6. ‘ಮಿಸುನಿ’– ಈ ಪದದ ಅರ್ಥ

   a. ವಜ್ರ b. ಚಿನ್ನ c. ತಾಮ್ರ d. ಕಂಚು

7. ‘ಅದು ಇದು ಎಣಿಸದಿರುವುದು ಯಾವುದು?’

   a. ಮನುಷ್ಯ b. ಪಕ್ಷಿ c. ಗಿಡಮರ d. ಪ್ರಾಣಿ

8. ________ ಮೇಲೆ ಹಾಲನ್ನು ಇಡಲಾಗಿದೆ.

   a. ಒಲೆಯ b. ಓಲೆಯ c. ವಲೆಯ d. ವೊಲೆಯ

9. ಶಲ್ಯನಿಗೆ ಆದರಾತಿಥ್ಯದ ಏರ್ಪಾಡು ಮಾಡಿದವರು ಯಾರು?

   a. ಧರ್ಮರಾಯ b. ಕೃಷ್ಣ c. ದುರ್ಯೋಧನ d. ಅರ್ಜುನ

10. ‘ನೀನೂ ಕೃಷ್ಣನಷ್ಟೇ ಒಳ್ಳೆಯ ಸಾರಥಿ’ – ಈ ಮಾತನ್ನು ಯಾರು ಹೇಳಿದರು?

    a. ಭೀಮ b. ದುರ್ಯೋಧನ c. ಕರ್ಣ d. ಧರ್ಮರಾಯ

11. ವಿಮಲ <u>ಮನೆಗೆ</u> ಹೋದಳು. – ಈ ವಾಕ್ಯದಲ್ಲಿ ಗೆರೆ ಎಳೆದ ಪದದಲ್ಲಿರುವ ವಿಭಕ್ತಿ ಗುರ್ತಿಸಿ

    a. ಪ್ರಥಮ b. ತೃತೀಯ c. ಚತುರ್ಥಿ d. ಷಷ್ಠಿ

12. ನನಗೆ ಮೂವರು __________ ಇದ್ದಾರೆ.

a. ತಮ್ಮಂದಿರು b. ತಮ್ಮ c. ಗೆಳೆಯ d. ಗೆಳತಿ

13. 'ಭೀತಿ' – ಈ ಪದದ ವಿರುದ್ಧ ಪದ

a. ಭಯವಿಲ್ಲದ b. ನಿರ್ಭೀತಿ c. ಭೀತಿಯಿಲ್ಲದ d. ಅಭೀತಿ

14. ಆನೆ ಎಷ್ಟು ವರ್ಷಕ್ಕೊಮ್ಮೆ ಮರಿ ಹಾಕುತ್ತದೆ?

a. ೩ b. ೪ c. ೫ d. ೬

15. 'ಹೊಳೆಯುವುದೆಲ್ಲಾ ___________' – ಈ ಗಾದೆಯ ಪೂರ್ಣಗೊಳಿಸಿ.

a. ಚಿನ್ನವಲ್ಲ b. ಉತ್ತರವಲ್ಲ c. ಯೋಚನೆಯಲ್ಲ d. ಸುಳಿವಲ್ಲ

16. 'ಮಹರ್ಷಿ' – ಈ ಪದವನ್ನು ಬಿಡಿಸಿ ಬರೆದಾಗ

a. ಮಹಾ + ಹರ್ಷಿ b. ಮಹಾ + ಋಷಿ c. ಮಹಾ + ರುಷಿ d. ಮ + ಹರ್ಷಿ

17. 'ದೇವಾಲಯ' – ಈ ಪದ ಯಾವ ಸಂಧಿಗೆ ಉದಾಹರಣೆಯಾಗಿದೆ.

a. ವೃದ್ಧಿಸಂಧಿ b. ಯಣ್‌ಸಂಧಿ c. ಸವರ್ಣದೀರ್ಘಸಂಧಿ d. ಗುಣ ಸಂಧಿ

18. 'ತಾಯಿಯನ್ನು ಕಾಣುತ್ತಲೇ ಮಗುವಿಗೆ ಸಂತೋಷವಾಯಿತು' – ಈ ವಾಕ್ಯದಲ್ಲಿ ಗೆರೆ ಎಳೆದ ಪದದ ಅರ್ಥ ಕೊಡುವ ನುಡಿಗಟ್ಟು

a. ತಲೆದೂಗು b. ಮುಖ ಅರಳು c. ಮೇಲುಗೈ d. ಬೇರೂರು

19. ಅಕಾರಾದಿಯಾಗಿ ಬರೆದಿರುವ ಪದಗಳ ಸರಿಯಾದ ಕ್ರಮ ಗುರ್ತಿಸಿ. 6x2=12

a. ಕುಂತಿ, ಅರ್ಜುನ, ಏಕಲವ್ಯ, ಉತ್ತರೆ b.ಅರ್ಜುನ, ಉತ್ತರೆ, ಏಕಲವ್ಯ, ಕುಂತಿ

c. ಉತ್ತರೆ, ಏಕಲವ್ಯ, ಅರ್ಜುನ, ಕುಂತಿ d.ಅರ್ಜುನ, ಏಕಲವ್ಯ, ಉತ್ತರೆ, ಕುಂತಿ

೨೦. ಜೇಡರ ದಾಸಿಮಯ್ಯ ಬರೆದಿರುವ ವಚನದ ಸಾಲುಗಳನ್ನು ಗುರ್ತಿಸಿ

a. ಅಂಧಕಾರದ ದೆಸೆಯಿಂದ ಚಂದ್ರನ ಪ್ರಭೆಯಾಯಿತು
ನಿಂದಕರ ನುಡಿಯಿಂದ ಏಡಿಸಲ್ಕೈ ಶಿವ ಭಕ್ತಿಯ ಪ್ರಭೆಯಾಯಿತು

b. ಹಿಡಿದ ವ್ರಥವ ಬಿಡದಿರಲು
ಅದೇ ಮಹಾ ಜ್ಞಾನದಾಚರಣೆ ಎಂಬೆನು ಅಜಗಣ್ಣ ತಂದೆ

c. ನೀನಾಗಲೇ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಭುಕ್ಕೇಶ್ವರಾ

d. ಬೆದರದೆ ಬೆಚ್ಚದೆ ಇರ್ದೆಡೆ
ಕರವಿಡಿದೆತ್ತಿಕೊಂಬ ನಮ್ಮ ರಾಮನಾಥ

21. ಪದ್ಯದ ಸಾಲುಗಳು ಸರಿಯಾಗಿರುವ ಕ್ರಮವನ್ನು ಆರಿಸಿ.
1. ಮುತ್ತೈದೆ ಎಲೆ ಹೆಣ್ಣೆ ತೋರು ಬಾರೆ ತವರೂರ
2. ಬಾಳೆ ಬಲಕ್ಕೆ ಬಿಡೊ ಸೀಬೆ ಎಡಕ್ಕೆ ಬಿಡೊ
3. ಅಲ್ಲಿಹುದೇ ನನ್ನ ತವರೂರು
4. ನಟ್ಟ ನಡುವೇಲಿ ನೀ ಹೋಗೋ ಬಳೆಗಾರ

a. 2, 3, 4, 1 b. 2, 4, 3, 1 c. 1, 2, 3, 4 d. 4,3, 2, 1

22. ನದಿಯನ್ನು _ ಟಿ ಆಚೆಯ _ ಡ ಸೇರಿದರೆ – ಡ್ಡ ಆಲದ ಮರ ಕಾಣುತ್ತ _. → ಈ ವಾಕ್ಯವನ್ನು ಪೂರ್ಣಗೊಳಿಸಲು ಕೆಳಗೆ ನೀಡಿರುವ ಉತ್ತರಗಳಲ್ಲಿ ಯಾವುದು ಅನುಕ್ರಮವಾಗಿ ಸರಿಹೊಂದುತ್ತದೆ.

a. ದ, ದಾ, ದೆ, ದೊ b. ದಾ, ದ, ದೊ, ದೆ c. ದೊ, ದೆ, ದಾ, ದ d. ದ, ದಾ, ದೊ, ದೆ

23. 'ಮನುಷ್ಯನಲ್ಲಿ ಮಾತು ಉಂಟು
ಮಾತಿನಂತೆ ಇಲ್ಲ ಮನ' – ಈ ಪದ್ಯಭಾಗಕ್ಕೆ ಸೂಕ್ತವಾದ ಸಾರಾಂಶವನ್ನು ಗುರ್ತಿಸಿ.

a. ಮಾನವ ಗಂಡು–ಹೆಣ್ಣು, ಜಾತಿ–ಧರ್ಮ ಎಂಬ ಕಟ್ಟುಪಾಡುಗಳಿಗೆ ಒಳಗಾಗಿದ್ದಾನೆ.
b. ಗಿಡ ಮರಗಳು ಅದು ಇದು ಎಂಬ ಭೇದ ಭಾವ ಮಾಡುವುದಿಲ್ಲ.
c. ಮಾನವನಿಗೆ ಮಾತನಾಡುವ ಶಕ್ತಿ ಇದೆ. ಆದರೆ ಆ ಮಾತಿನಂತೆ ನಡೆಯುವ ಮನಸ್ಥಿತಿ ಅವನಲ್ಲಿಲ್ಲ.
d. ಮನುಷ್ಯರು ಯಾರೇ ಬಂದು ಏನೇ ಮಾಡಿದರೂ ಎಲ್ಲವನ್ನೂ ಸಹಿಸಿ ಮೌನವಾಗಿರುತ್ತಾರೆ.

24. ಈ ಕೆಳಗಿನ ಘಟನೆಯ ಸರಿಯಾದ ಕ್ರಮವನ್ನು ಗುರ್ತಿಸಿ

1. ನರಿಯೊಂದು ಕಾಗೆಯಿಂದ ರೊಟ್ಟಿ ಪಡೆಯಲು ಕಾಗೆಯ ಕಂಠವನ್ನು ಹೊಗಳಿ "ನಿನ್ನ ಹಾಡನ್ನು ಕೇಳುವ ಆಸೆ ನನಗೆ" ಎಂದಿತು.
2. ಕಾಗೆ ಅದರ ಹೊಗಳಿಕೆಗೆ ಮಾರು ಹೋಗಿ ಕಾವ್ ಕಾವ್ ಎಂದು ಹಾಡತೊಡಗಿತು.
3. ಒಂದು ಕಾಗೆ ಮರದ ಮೇಲೆ ಕುಳಿತು ರೊಟ್ಟಿ ತಿನ್ನುತ್ತಿತ್ತು.
4. ಆಗ ಕೆಳಗೆ ಬಿದ್ದ ಅದರ ರೊಟ್ಟಿಯನ್ನು ನರಿ ಕಚ್ಚಿಕೊಂಡು ಓಡಿಹೋಯಿತು.

a. 1, 2, 3, 4 b. 2, 1, 3, 4 c. 4, 2, 3, 1 d. 3, 1, 2, 4